## ವಾರ್ತಾ ವಿಶ್ಲೇಷಣೆ

### ಭವಿಷ್ಯದ ಯುಗವು ದಾನವರ ಯುಗವೇ?

ಹಿಂದಿನ ತಿಂಗಳ ವಾರ್ತಾ ವಿಶ್ಲೇಷಣೆಯಲ್ಲಿ ಮುಂದಿನ ಯುಗ ಮಾನವ ಯುಗವೇ ಎಂಬ ಬಗ್ಗೆ ವಿಚಾರ ಮಾಡಿದ್ದೆವು. ಆದರೆ ಇತ್ತೀಚಿನ ಘಟನೆಗಳು, ಭವಿಷ್ಯದ ಯುಗ ಮಾನವ ಯುಗವಾಗದೆ ದಾನವರ ಯುಗವಾಗುವುದೇ ಎಂಬ ಸಂಶಯವನ್ನು ಮೂಡಿಸಿವೆ. ಲೆಬನಾನ್ ದೇಶದಲ್ಲಿ ಹಿಜ್‌ಬುಲ್ಲಾ ಎನ್ನುವ ಮುಸ್ಲಿಂ ಭಯೋತ್ಪಾದಕ ಸಂಘಟನೆ ಇಸ್ರೇಲ್ ದೇಶದ ಇಬ್ಬ ಸೈನಿಕನನ್ನು ಅಪಹರಿಸಿತು. ಅದಕ್ಕೆ ಪ್ರತಿಯಾಗಿ ಇಸ್ರೇಲ್ ದೇಶದ ಸೈನ್ಯ ಆ ಸಂಘಟನೆಯನ್ನು ನಿರ್ಮೂಲನೆ ಮಾಡಬೇಕೆಂದು ಲೆಬನಾನ್ ದೇಶದ ಗಡಿಯೊಳಕ್ಕೆ ನುಗ್ಗಿ ಅಪಾರ ಸಾವು ನೋವುಗಳಿಗೆ ಕಾರಣವಾಗಿದೆ. ಹಿಜ್‌ಬುಲ್ಲಾ ಅದಕ್ಕೆ ಪ್ರತಿಯಾಗಿ ಪ್ರತಿದಿನವೂ ನೂರಾರು ರಾಕೇಟುಗಳನ್ನು ಇಸ್ರೇಲಿನ ವಿವಿಧ ನಗರಗಳ ಮೇಲೆ ಮಳೆಗರೆಯುತ್ತಿದೆ. ಅಮೆರಿಕ ಮತ್ತು ಯೂರೋಪು ಖಂಡದ ದೇಶಗಳು ಈ ಹಿಂಸಾಚಾರವನ್ನು ನಿಲ್ಲಿಸಲು ಯಾವುದೇ ಪ್ರಯತ್ನ ಮಾಡುತ್ತಿಲ್ಲ ಎನ್ನುವುದು ಗಮನಾರ್ಹ. ಇಸ್ರೇಲ್, ಯುದ್ಧವು ಭಯೋತ್ಪಾದಕತೆಯ ವಿರುದ್ಧದ ಸಮರ ಎಂದು ಘೋಷಿಸಿದರೆ, ಮುಸ್ಲಿಂ ದೇಶಗಳು, ಇಸ್ರೇಲ್ ಅಮಾಯಕ ಜನರ ಹತ್ಯೆಯಲ್ಲಿ ತೊಡಗಿದೆ ಎಂದು ಆಪಾದಿಸಿವೆ.

ಆದರೆ ಭಯೋತ್ಪಾದಕತೆಯ ಪಿಡುಗನ್ನು ಹಲವು ದಶಕಗಳಿಂದ ಅನುಭವಿಸುತ್ತಿರುವ ಭಾರತ, ಇತ್ತೀಚಿನ ಮುಂಬೈ ಸರಣಿ ಬಾಂಬು ಸ್ಫೋಟಗಳ ನಂತರ ಮಾಡಿದ್ದಾದರೂ ಏನು? ಈ ದುಷ್ಕೃತ್ಯಕ್ಕೆ ಕಾರಣವಾದ ಪಾಕಿಸ್ತಾನಕ್ಕೆ ಒಂದು ಗಂಭೀರವಾದ ಎಚ್ಚರಿಕೆಯನ್ನು ನೀಡಲೂ ನಮ್ಮ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಭಯೋತ್ಪಾದಕತೆಯ ವಿರುದ್ಧ ಇಸ್ರೇಲಿನ ಪ್ರತಿಕ್ರಿಯೆ ಉದ್ಧಟವಾದದು, ನಿಜ. ಆದರೆ ಭಾರತ ಸರ್ಕಾರದ ನಿರ್ಲಜ್ಜ ನಿಷ್ಕ್ರಿಯತೆ ಕೂಡ ಸರಿಯಾದುದೇ?

ಮಹಾಭಾರತದಲ್ಲಿ ಧರ್ಮವಿರೋಧಿಗಳನ್ನು ಯಾವ ದಯೆ ದಾಕ್ಷಿಣ್ಯವಿಲ್ಲದೆ ಕೊಂದುಹಾಕುವಂತೆ ಶ್ರೀಕೃಷ್ಣ ಕರೆಕೊಡುತ್ತಾನೆ. ಅನ್ಯಾಯ ಮತ್ತು ಅಧರ್ಮಗಳನ್ನು ಪ್ರತಿನಿಧಿಸುವ ಕೌರವಸೈನ್ಯವನ್ನು ಕುತಂತ್ರದಿಂದಾದರೂ ಗೆಲ್ಲುವಂತೆ ಪಾಂಡವರನ್ನು ಹುರಿದುಂಬಿಸುತ್ತಾನೆ. ಆ ಮೂಲಕ ಸಮಾಜದಲ್ಲಿ ಧರ್ಮಪರವಾದ ಶಕ್ತಿಗಳನ್ನು ಪುನರುಜ್ಜೀವನಗೊಳಿಸಬೇಕೆನ್ನುವುದೇ ಆ ಮಹಾಪುರುಷನ ಉದಾತ್ತ ಧ್ಯೇಯವಾಗಿತ್ತು. ಶ್ರೀಕೃಷ್ಣ ಅನುಗ್ರಹಿಸಿದ ಭಗವದ್ಗೀತೆ ಕೂಡ ಅಂತಹ ಒಂದು ಸಾಹಸ ಕಾರ್ಯಕ್ಕೆ ಆಧ್ಯಾತ್ಮಿಕ ಮತ್ತು ತಾತ್ವಿಕ ನೆಲಗಟ್ಟನ್ನು ನೀಡುವ ಗ್ರಂಥ.

ಆದರೆ ಶ್ರೀಕೃಷ್ಣನ ಆರಾಧಕರೂ, ಭಗವದ್ಗೀತೆಯ ಶ್ರದ್ಧಾವಂತ ಓದುಗರೂ ಆದ ನಾವು ಆತನ ರಣಕಹಳೆಯನ್ನು ಏಕೆ ಆಲಿಸುತ್ತಿಲ್ಲ? ಭಯೋತ್ಪಾದನೆಯ ವಿರುದ್ಧದ ನಮ್ಮ ನೀತಿ ಹಲವಾರು ವರ್ಷಗಳಿಂದ ಏಕೆ ಹೀಗೆ ಮೆದುವಾಗಿ ಹೋಗಿದೆ? ಇದು ನಮ್ಮ ಸಾತ್ವಿಕತೆಯೋ ಅಥವಾ ಜಡಗಟ್ಟಿದ ತಮಸ್ಸಿನಿಂದ ಉಂಟಾದ ಹೇಡಿತನವೋ?

ನಾವು ಅಹಿಂಸಾವಾದಿಗಳು ಎಂಬ ಪೊಳ್ಳು ಆದರ್ಶವಾದವನ್ನು ಮುಂದಿರಿಸಿಕೊಂಡು ಭಯೋತ್ಪಾದನೆಯನ್ನು ದಮನಗೊಳಿಸುವಲ್ಲಿ ನಾವು ತೋರುತ್ತಿರುವ ನಿರ್ಲಕ್ಷ್ಯತೆ ಅಕ್ಷಮ್ಯವಾದುದು. ಇಸ್ರೇಲಿನಂತೆ ಮರುಹಿಂಸೆಯನ್ನು ನಾವು ಮಾಡಬೇಕಾಗಿಲ್ಲ. ಆದರೆ ಅಪರಾಧಿಗಳನ್ನು ಯಾವ ಕನಿಕರವೂ ಇಲ್ಲದೆ ಸದೆಬಡೆಯುವ ಕಾರ್ಯವನ್ನಾದರೂ ಗಂಭೀರವಾಗಿ ಕೈಗೊಳ್ಳಲೇಬೇಕು. ಭಯೋತ್ಪಾದನೆಯನ್ನು ಪ್ರೋತ್ಸಾಹಿಸುವ ಎಲ್ಲ ಶಕ್ತಿಗಳನ್ನೂ ನಿಯಂತ್ರಿಸಬೇಕು. ಭಯೋತ್ಪಾದನೆ ಮಾನವತೆಯ ವಿರುದ್ಧ ನಡೆಯುತ್ತಿರುವ ದೊಡ್ಡ ಅಪರಾಧ. ಅದನ್ನು ಸಹಿಸಿಕೊಂಡರೆ ಅಧರ್ಮಕ್ಕೆ ಉತ್ತೇಜನ ನೀಡುತ್ತಿರುವ ದೊಡ್ಡ ತಪ್ಪು ನಮ್ಮದಾಗುತ್ತದೆ. ಅಲ್ಲವೇ?

### ಬಗ್ಗಿದ ಬೆನ್ನುಮೂಳೆ ನೆಟ್ಟಗಾದುದು ಹೇಗೆ?

ಮಗು ಹುಟ್ಟುವ ಸಮಯವಾಗಿದೆ. ತಲೆಕೆಳಗಾಗಿ ಮಗು ತಾಯಿಯ ಗರ್ಭಾಶಯದಿಂದ ಹೊರಗೆ ಬರಲು ಪ್ರಯತ್ನಮಾಡುತ್ತಿದೆ. ಆದರೆ ಗರ್ಭಾಶಯದ ರಚನೆ ನೇರವಾಗಿಲ್ಲ. ಆದ್ದರಿಂದ ಮಗು ಇಳಿದು ಬರುವುದಕ್ಕೂ ಬಹಳ ಪ್ರಯಾಸಪಡುತ್ತಿದೆ. ಮಗುವಿಗೆ ಹೆಚ್ಚು ಪ್ರಯಾಸವಾದಂತೆ ಅದರ ತಾಯಿಗೂ ಅಪಾರ ನೋವಿನ ಅನುಭವ- ಬೇರೆ ಯಾವ ಪ್ರಾಣಿಗಳೂ ಹುಟ್ಟುವಾಗ ಇಷ್ಟು ಪ್ರಯಾಸ ಪಡುವುದಿಲ್ಲವಂತೆ. ಮಗು ಪ್ರಯಾಸಪಡಲು ತಾಯಿಯ ಗರ್ಭಾಶಯದ ರಚನೆಯೇ ಕಾರಣ. ಆ ಪರಿತಾಪ ಮಾನವನಿಗೆ ಮಾತ್ರ, ಇದೇಕೆ ಹೀಗೆ?

ಉತ್ತರ ಪಡೆಯಲು ನಾವು ಚಿಂಪಾಂಜಿಯ ಹತ್ತಿರ ಹೋಗಬೇಕು ಎನ್ನುತ್ತದೆ National Geographic ಪತ್ರಿಕೆಯ ಇತ್ತೀಚಿನ ಸಂಚಿಕೆ. ಈ ವಿಷಯದಲ್ಲಿ ಅದೇನು ನಮ್ಮ ಗುರುವೇ? ಹೌದು, ಏಕೆಂದರೆ ಜೈವಿಕ ವಿಕಾಸ ಪ್ರಕ್ರಿಯೆಯಲ್ಲಿ, ಚಿಂಪಾಂಜಿ ನಮ್ಮ ಹತ್ತಿರದ ಅಣ್ಣ. ಅದರ ಶರೀರ ರಚನೆಯನ್ನು ಅಧ್ಯಯನ ಮಾಡಿದಾಗ, ಪ್ರಕೃತಿದತ್ತವಾದ ಮಾನವ ಶರೀರದ ರಚನೆ ಕೆಲವು ಅಂಶಗಳಲ್ಲಿ ಹೇಗೆ ಅತ್ಯಂತ ಉಪಯೋಗಕಾರಿಯಾಗಿದೆ ಮತ್ತೆ ಕೆಲವು ಅಂಶಗಳಲ್ಲಿ ಹೇಗೆ ಅಸಹಾಯಕವಾಗಿದೆ ಎಂಬುದರ ಅರಿವು ನಮಗೆ ಉಂಟಾಗುತ್ತದೆ.

ಮಾನವನ ಶರೀರ ರಚನೆಯಲ್ಲಿ ಅತ್ಯಂತ ಪ್ರಮುಖವಾದುದು ಎರಡು ಕಾಲುಗಳ ಮೇಲೆ ನಡೆಯುವ ಸಾಮರ್ಥ್ಯದ ಗಳಿಕೆಯೇ ಎಂದು ವಿಜ್ಞಾನಿಗಳು ಹೇಳುತ್ತಾರೆ. ಇದರಿಂದಾಗಿ ಮುಂದಿನ ಎರಡು ಪಾದಗಳು ಕೈಗಳಾಗಿ ಅವುಗಳ ಮೂಲಕ ವಸ್ತುಗಳನ್ನು ಹಿಡಿಯುವ ಸಾಮರ್ಥ್ಯ ನಮಗೆ ಬಂತು. ಬೇರೆ ಯಾವ ಪ್ರಾಣಿಗೂ ಸಾಧ್ಯವಾಗದ ಹಲವಾರು ಚಟುವಟಿಕೆಗಳು ನಮಗೆ ಸಾಧ್ಯವಾಗಿವೆ. ಅಷ್ಟೇ ಅಲ್ಲ, ನಡೆದಾಡುವಾಗಲೂ ಬೇರೆ ಎಲ್ಲ ಪ್ರಾಣಿಗಳಿಗಿಂತ ಕಡಿಮೆ ಶಕ್ತಿಯನ್ನು ನಾವು ಉಪಯೋಗಿಸುತ್ತೇವೆ.

ಆದರೆ ಈ ಅದ್ಭುತ ವಿಕಾಸ ಪ್ರಕ್ರಿಯೆಯಲ್ಲಿ ನಮ್ಮ ಬೆನ್ನು ಮೂಳೆಯ ಸಾಮರ್ಥ್ಯ ಕುಂಠಿತವಾಯಿತು ಎಂದು ವಿಜ್ಞಾನಿಗಳು ಹೇಳುತ್ತಾರೆ. ಇತರ ಪ್ರಾಣಿಗಳಲ್ಲಿ ಬೆನ್ನುಮೂಳೆ ಪೂರ್ಣ ಬಗ್ಗಿರುತ್ತದೆ. ಸಾವಿರಾರು ವರ್ಷಗಳ ವಿಕಾಸದ ಪ್ರಕ್ರಿಯೆಯಿಂದ ಮಾನವನಲ್ಲಿ ಅದು ನೆಟ್ಟಗಾಗಿದೆಯಾದರೂ, ಪೂರ್ಣವಾಗಿ ಸರಳರೇಖೆಯಂತೆ ಅದರ ರಚನೆ ಇಲ್ಲ. ಇದರಿಂದಾಗಿ ಬೆನ್ನುಮೂಳೆಯ ಕೆಳಭಾಗವು ಅತ್ಯಧಿಕ ಒತ್ತಡವನ್ನು ಭರಿಸಬೇಕಾಗಿದೆ ಎಂದು ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ಆಧುನಿಕ ಜೀವನ ಶೈಲಿ, ಆಹಾರವಿಹಾರ, ಕಾರ್ಯಶೈಲಿ ಇವೆಲ್ಲವೂ ಹೆಚ್ಚು ಹೆಚ್ಚು ಕೃತಕವಾಗುತ್ತ ಬಂದಹಾಗೆ ಬೆನ್ನನೋವಿನ ವ್ಯಾಧಿಯೂ ಸಾರ್ವತ್ರಿಕವಾಗುತ್ತಿದೆ. ಇದಕ್ಕೆ ಮೂಲ ಕಾರಣ ಸೊಟ್ಟಗಿದ್ದ ಬೆನ್ನು ನೆಟ್ಟಗಾಗಲು ನಡೆಸಿದ ಸಾವಿರಾರು ವರ್ಷಗಳ ಜೈವಿಕ ಪ್ರಯತ್ನವೇ ಕಾರಣ.

ಮೇಲಿನ ಸಂಗತಿಯಿಂದ ನಾವು ಕಲಿಯಬೇಕಾದ ಪಾಠ ಏನು? ನೆಟ್ಟಗೆ ನಡೆಯುವ ಶಕ್ತಿಯನ್ನು ಕೊಟ್ಟ, ಮುಂದಿನ ಪಾದಗಳನ್ನು ಕೈಗಳಾಗಿ ಪರಿವರ್ತಿಸಿದ ಪ್ರಕೃತಿ ಈ ಪ್ರಕ್ರಿಯೆಯಲ್ಲಿ ನಮ್ಮ ಬೆನ್ನುಮೂಳೆಯ ಸಾಮರ್ಥ್ಯವನ್ನು ಇತರ ಪ್ರಾಣಿಗಳಿಗಿಂತಲೂ ಕುಂಠಿತಗೊಳಿಸಿತು. ಜೀವನದಲ್ಲಿ ಯಾವುದೂ ಪುಕ್ಕಟೆಯಲ್ಲ. ಯಾವುದೇ ತೆರನಾದ ಸಫಲತೆಗೂ ನಾವು ಅದಕ್ಕೆ ತಕ್ಕನಾದ ಬೆಲೆಯನ್ನು ತೆತ್ತೇ ತೀರುತ್ತೇವೆ. ಇದು ಪ್ರಕೃತಿಯ ನಿಯಮ. ಆ ನಿಯಮವನ್ನು ಅರ್ಥಮಾಡಿಕೊಂಡು ಸಾಧ್ಯವಾದಷ್ಟೂ ಅದಕ್ಕೆ ಅನುಗುಣವಾಗಿ ವಿನೀತಭಾವದಿಂದ ಜೀವನ ನಡೆಸಿದಾಗ, ಶಾಂತಿ ಮತ್ತು ನೆಮ್ಮದಿಗಳನ್ನು ಕಾಣಲು ಸಾಧ್ಯ. ಅಹಂಕಾರದಿಂದ ಪ್ರಕೃತಿಯನ್ನೇ ಮೆಟ್ಟಲು ಹೋದರೆ ಅದು ಮಾನವ ಜನಾಂಗದ ಜೀವನಾಡಿಯನ್ನೇ ನಿಲ್ಲಿಸೀತು, ನಮ್ಮ ಬೆನ್ನು ಮೂಳೆಯನ್ನು ಮುರಿದೀತು. ಎಚ್ಚರ!!